# ಸೇನಾಪಡೆ ಕಟ್ಟಿದ ತೈವಾನ್ ತಾತ!

■ ಪ್ರವೀಣ ಕುಲಕರ್ಣಿ

ಕೋಟ್ಯಂತರ ಡಾಲರ್‌ನಷ್ಟು ಬ್ಯಾಂಕ್ ಬ್ಯಾಲೆನ್ಸ್ ಹೊಂದಿದವರು ತೈವಾನ್‌ನ ಈ ತಾತ. 'ಯುನೈಟೆಡ್ ಮೈಕ್ರೊಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್' (ಯುಎಂಸಿ) ಎಂಬ ದೈತ್ಯಗಾತ್ರದ ಉದ್ಯಮವನ್ನೂ ಕಟ್ಟಿ ಬೆಳೆಸಿದವರು ಅವರು. ಮನಸ್ಸು ಮಾಡಿದರೆ ಸಿಂಗಪುರದಲ್ಲಿ ಹಾಯಾಗಿ, ಐಷಾರಾಮಿ ಜೀವನವನ್ನು ಅವರು ಸಾಗಿಸಬಹುದಿತ್ತು. ಆದರೆ, ದೇಶಪ್ರೇಮ ಅವರನ್ನು ಮತ್ತೆ ತಾಯ್ನಾಡಿಗೆ ಕರೆದುತಂದಿದೆ. ರಾಬರ್ಟ್ ತ್ಸಾವೊ (75) ಎಂಬ ಈ ತಾತ, ಮಾತೃಭೂಮಿ ತೈವಾನ್‌ನಲ್ಲಿ ನಿಂತು, 'ಆಕ್ರಮಣಶೀಲ' ಚೀನಾಕ್ಕೆ ಸಡ್ಡು ಹೊಡೆದಿದ್ದಾರೆ!

'ನೆರೆಯ ಚೀನಾ ದೇಶ ನಮ್ಮನ್ನು ಮೇಲಿಂದ ಮೇಲೆ ಕೆಣಕುತ್ತಾ, ಬೆದರಿಕೆ ಹಾಕುತ್ತಿರುವಾಗ ಸುಮ್ಮನೇ ಕೈಕಟ್ಟಿ ಕೂರಲು ಸಾಧ್ಯವಿಲ್ಲ' ಎಂದೆನ್ನುವ ಈ ತಾತ, ಮುಂದಿನ ಮೂರು ವರ್ಷಗಳಲ್ಲಿ ಮೂವತ್ತು ಲಕ್ಷದಷ್ಟು ದೊಡ್ಡ ಗಾತ್ರದ 'ನಾಗರಿಕ ಸೇನೆ'ಯನ್ನು ಕಟ್ಟಲು ಯೋಜನೆ ರೂಪಿಸಿದ್ದಾರೆ. ಅದಕ್ಕಾಗಿ ತಮ್ಮ 330 ಲಕ್ಷ ಡಾಲರ್ ಹಣವನ್ನೂ ಎತ್ತಿಟ್ಟಿದ್ದಾರೆ. ಅಮೆರಿಕ ಸಂಸತ್ತಿನ ಸ್ಪೀಕರ್ ನ್ಯಾನ್ಸಿ ಪೆಲೊಸಿ ಅವರ ತೈವಾನ್ ಭೇಟಿಯನ್ನು ವಿರೋಧಿಸಿ, ತೈವಾನ್ ಗಡಿಗುಂಟ ಮಿಲಿಟರಿ ಕಸರತ್ತು ನಡೆಸಿದ ಚೀನಾದ ಹೆಸರು ಕೇಳಿದರೆ ಸಾಕು, ತ್ಸಾವೊ ನಿಗಿನಿಗಿ ಕೆಂಡವಾಗುತ್ತಾರೆ. ಎಂದಾದರೂ ಒಂದುದಿನ ಚೀನಾ ದೇಶ, ತೈವಾನ್ ಮೇಲೆ ಪ್ರಭುತ್ವ ಸಾಧಿಸಲಿದೆ ಎಂಬ ಭೀತಿ ಇದ್ದೇ ಇದೆ. ಹಾಗೆ ತಮ್ಮ ದೇಶ ಪರಾಧೀನವಾಗುವ ಕುರಿತು ಮಾತನಾಡುವವರನ್ನು ವೈರಿಗಳಂತೆ ಕಾಣುತ್ತಾರೆ ತ್ಸಾವೊ.

'ನಾಗರಿಕ ಸೇನೆ' ಕಟ್ಟುವ ಕುರಿತು ಘೋಷಣೆ ಮಾಡಲು ತೈವಾನ್‌ನ ಸಂಸತ್ತಿಗೆ ಅವರು, ಥೇಟ್ ಸೇನಾಧಿಪತಿಯಂತೆಯೇ ದೇಹದ ರಕ್ಷಾಕವಚವನ್ನು ಧರಿಸಿ ಬಂದಿದ್ದರು. 'ಚೀನಾ ಒಂದುವೇಳೆ ತೈವಾನ್ ವಿರುದ್ಧ ಯುದ್ಧ ಸಾರಿದರೆ ಅದೊಂದು ಯುದ್ಧ ಅಪರಾಧವಾಗಲಿದ್ದು, ಮಾನವೀಯತೆ ಮೇಲೆ ಎಸಗಿದ ಕ್ರೌರ್ಯವೂ ಆಗಲಿದೆ' ಎಂದು ಅವರು ಆಕ್ರೋಶ ವ್ಯಕ್ತಪಡಿಸುತ್ತಾರೆ. 'ನಾನು ತರಬೇತಿ ಕೊಡಿಸಲಿರುವ ಮೂವತ್ತು ಲಕ್ಷ ಯೋಧರು ತೈವಾನ್‌ನ ಸೈನಿಕರ ಬೆಂಬಲಕ್ಕೆ ನಿಲ್ಲಲಿದ್ದಾರೆ. ಮೂರು ಲಕ್ಷ ಬಂದೂಕುಧಾರಿ ಯೋಧರನ್ನೂ ನಾನು ತಯಾರು ಮಾಡಲಿದ್ದೇನೆ. ಅವರೆಲ್ಲ ದೇಶ ರಕ್ಷಣೆಗೆ ನಿಲ್ಲಲಿದ್ದಾರೆ' ಎಂದು ಸೇನಾಧಿಕಾರಿಯಂತೆ ಗುಡುಗುತ್ತಾರೆ ಈ ತಾತ.



ಪೆಂಟಗನ್ (ಅಮೆರಿಕ ಸೇನೆಯ ಮುಖ್ಯ ಕಚೇರಿ) ಮಾಡಿರುವ ಅಂದಾಜಿನ ಪ್ರಕಾರ, ಚೀನಾ ಹತ್ತು ಲಕ್ಷ ಯೋಧರನ್ನು ಹೊಂದಿದ್ದರೆ, ತೈವಾನ್ ಬಲ ಕೇವಲ 88 ಸಾವಿರ. ಅಸಮ ಬಲದ ಇಂತಹ ಸನ್ನಿವೇಶದಲ್ಲಿ ತನ್ನನ್ನು ಸಂರಕ್ಷಿಸಿಕೊಳ್ಳಲು ನಾಗರಿಕರನ್ನೂ ತೊಡಗಿಸಿಕೊಳ್ಳುವ ತಂತ್ರವನ್ನು ತೈವಾನ್ ಅನುಸರಿಸುತ್ತಿದೆ. ಇದಕ್ಕೆ 'ಮುಳ್ಳುಹಂದಿ ತಂತ್ರ' ಎಂದು ಕರೆಯಲಾಗುತ್ತದೆ. ತನಗಿಂತ ಬಲಶಾಲಿಯಾದ ಪ್ರಾಣಿ ಬೇಟೆಯಾಡಲು ಬಂದರೆ ಹಂದಿಯು ತನ್ನ ಮೇಲಿನ ಮುಳ್ಳುಗಳನ್ನು ನೇರ ನಿಲ್ಲುವಂತೆ ಮಾಡಿ, ಕಾಪಾಡಿಕೊಳ್ಳುವಂತಹ ತಂತ್ರ ಇದಾಗಿದೆ. ಆ ದೇಶದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ನಾಲ್ಕು ತಿಂಗಳು ಕಡ್ಡಾಯವಾಗಿ ಮಿಲಿಟರಿ ಸೇವೆ ಸಲ್ಲಿಸಲೇಬೇಕೆಂಬ ನಿಯಮವಿದೆ.

ತೈವಾನ್‌ನ ಇತರ ದೊಡ್ಡ ಉದ್ಯಮಿಗಳಂತೆ ತ್ಸಾವೊ ಕೂಡ ಚೀನಾದಲ್ಲಿ ದೊಡ್ಡ ಪ್ರಮಾಣದ ಹೂಡಿಕೆ ಮಾಡಿದ್ದರು. ಎರಡೂ ದೇಶಗಳ ಸಂಬಂಧದ ವಿಷಯ ಬಂದಾಗ ಈ ಹಿಂದೆ ತುಂಬಾ ಎಚ್ಚರಿಕೆಯಿಂದ ಅವರು ಪ್ರತಿಕ್ರಿಯಿಸುತ್ತಿದ್ದರು. ಹಾಂಗ್‌ಕಾಂಗ್ ಮೇಲೆ ಚೀನಾ ಹಿಡಿತ ಸಾಧಿಸಿದ ಮೇಲೆ ಚೀನಾದಲ್ಲಿನ ಹೂಡಿಕೆಯಿಂದ ನಿಧಾನವಾಗಿ ಹಿಂದೆ ಸರಿದ ತ್ಸಾವೊ, ಆ ದೇಶದ ದೌರ್ಜನ್ಯವನ್ನು ನಿರ್ಭಿಡೆಯಿಂದ ಖಂಡಿಸಲು ಆರಂಭಿಸಿದರು. 'ನಮ್ಮ ದೇಶವನ್ನು ಇನ್ನೊಂದು ಹಾಂಗ್‌ಕಾಂಗ್ ಆಗಲು ಬಿಡುವುದಿಲ್ಲ' ಎಂದು ಅವರು ಗಟ್ಟಿಸಿ ಹೇಳತೊಡಗಿದರು.

'ಚೀನೀ ಕಮ್ಯುನಿಸ್ಟರ ಮೂಲತತ್ವವೇ ಗೂಂಡಾಗಾರಿಕೆ. ಸೋವಿಯತ್ ಒಕ್ಕೂಟದಿಂದ ಅವರು ಈ ರೀತಿ ಹಿಂಸಿಸುವುದನ್ನು ಮತ್ತು ಸುಳ್ಳು ಹೇಳುವುದನ್ನು ಕಲಿತರು. ಸರ್ಕಾರ ಮತ್ತು ದೇಶದ ವೇಷದಲ್ಲಿರುವ ದರೋಡೆಕೋರ ಸಂಘಟನೆ ಅವರದಾಗಿದೆ' ಎಂದು ತ್ಸಾವೊ ಆಕ್ರೋಶ ಹೊರಹಾಕುತ್ತಾರೆ.

ಬಲಾಢ್ಯ ರಾಷ್ಟ್ರಗಳು ತಮ್ಮ ಪಕ್ಕದ ಪುಟ್ಟ ದೇಶಗಳ ಮೇಲೆ ಹೀಗೆ ದಂಡೆತ್ತಿ ಬರುವಾಗ ಜಗತ್ತಿನ ಇತರ ರಾಷ್ಟ್ರಗಳು ಪುಟ್ಟ ದೇಶಗಳ ಬೆಂಬಲಕ್ಕೆ ನಿಲ್ಲಬೇಕು ಎಂದು ಆಗ್ರಹಿಸುವ ಈ ತಾತ, 'ಉಕ್ರೇನ್‌ನ ಸ್ಥಿತಿ ಬೇರೆ ಯಾವ ದೇಶಕ್ಕೂ ಬರಬಾರದು' ಎಂದೂ ಆಶಿಸುತ್ತಾರೆ.

ಸಿಂಗಪುರದಲ್ಲಿ ನೆಮ್ಮದಿಯಾಗಿ ಇರಬೇಕು ಎಂದು ಹಿಂದೊಮ್ಮೆ ತೈವಾನ್ ಪೌರತ್ವವನ್ನು ಬಿಟ್ಟುಕೊಟ್ಟಿದ್ದ ಈ ತಾತ, ಈಗ ತಾಯಿ ನೆಲದಲ್ಲೇ ಕೊನೆಯುಸಿರು ಎಳೆಯಬೇಕು ಎಂದು ದೇಶಕ್ಕೆ ಮರಳಿದ್ದಾರೆ. ದೇಶದ ಸಂಪತ್ತನ್ನು ವೈಯಕ್ತಿಕ ಹಿತಾಸಕ್ತಿಗಾಗಿ ಲೂಟಿ ಹೊಡೆಯುವ ಭಾರತದ ಬಹುತೇಕ ಉದ್ಯಮಿಗಳು, ದೇಶಕ್ಕಾಗಿ ವೈಯಕ್ತಿಕ ಸಂಪತ್ತನ್ನೇ ಧಾರೆ ಎರೆದ ತ್ಸಾವೊ ಅವರಿಂದ ಕಲಿಯುವುದು ಬೆಟ್ಟದಷ್ಟಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65